# ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

E-mail- ddtp.hubli@gmail.com Phone Number: 0836-2358034

ನಂ.ಹುಧಾಮಪಾ/50/ವಿನ್ಯಾಸ/2024–25 | 32 ದಿನಾಂಕ: 02.12.2024

ವಿಷಯ: ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ/ಬ್ಲಾಕನಂ. 154 ನೇದ್ದರ 01ಎಕರೆ–25ಗುಂಟೆ ವಿಸ್ತೀರ್ಣದ ವಸತಿ ಉದ್ದೇಶದ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಕುರಿತು.

ಉಲ್ಲೇಖ:–1) ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: 266039 ದಿನಾಂಕ: 21.10.2021.

2) ವಿನ್ಯಾಸಕ್ಕೆ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ನೀಡಿದ ಪತ್ರ ಸಂ.ಹು.ಧಾ.ನ.ಪ್ರಾ/ಯೋ.ವಿ/ವಿನ್ಯಾಸ/98/2021–22/2698 ದಿನಾಂಕ:13.09.2022

3) ವಿನ್ಯಾಸಕ್ಕೆ ಪ್ರಾಧಿಕಾರದಿಂದ ಅಭಿವೃದ್ಧಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರ ನೀಡಿದ ಸಂ.ಹು.ಧಾ.ನ.ಪ್ರಾ/ಅ.ವಿ/ಗೋಕುಲ/ಖಾ.ವಿ/2023–24/572,ದಿನಾಂಕ:17.05.2024

4) ಹು.ಧಾ.ನ.ಪ್ರಾಧಿಕಾರದ ವಿನ್ಯಾಸಕ್ಕೆ ಅಂತಿಮ ವಿನ್ಯಾಸ ಆದೇಶ ನೀಡಿದ ಕ್ರಸಂ: ಹುಧಾನಪ್ರಾ/ಯೋ.ವಿ/ ವಿನ್ಯಾಸ/98/2021–22/ 1980 ದಿನಾಂಕ:14.08.2024.

5) ಶ್ರೀ ಭೀಮಪ್ಪ ತಂದೆ ದ್ಯಾಮಪ್ಪ ಜಟ್ಟೆಪ್ಪನವರ ಇವರ ಮನವಿ ದಿನಾಂಕ: 07.06.2024.

6) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ:16.08.2024ರ ಹೆಚ್ಚಿನ ವಿಷಯ ಸಂಖ್ಯೆ: 14 ಠರಾವ ಸಂ: 258.

DDTP ಉಪ ನಿರ್ದೇಶಕರು ಹು. ಧಾ. ಮ. ಪಾ. ಹುಬ್ಬಳ್ಳಿ

**ಪೀಠಿಕೆ**

ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ/ಬ್ಲಾಕನಂ. 154 ನೇದ್ದರ 01ಎಕರೆ–25ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸವನ್ನು ಶ್ರೀ ಭೀಮಪ್ಪ ತಂದೆ ದ್ಯಾಮಪ್ಪ ಜಟ್ಟೆಪ್ಪನವರ ಇವರು ಉಲ್ಲೇಖ(5) ರನ್ವಯ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆ. ಉಲ್ಲೇಖ (1) ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ ಇವರಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶ ಪಡೆದಿರುತ್ತಾರೆ. ನಂತರ ಉಲ್ಲೇಖ (2)ರಲ್ಲಿ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ಕೊಂಡಿರುತ್ತಾರೆ ಹಾಗೂ ಉಲ್ಲೇಖ (3)ರನ್ವಯ ಸದರಿ ವಸತಿ ವಿನ್ಯಾಸದ ಕಾಮಗಾರಿಗಳ ಬಗ್ಗೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ತೃಪ್ತಿಕರವಾಗಿ ನಿರ್ವಹಿಸಿರುವುದಾಗಿ, ಪ್ರಾಧಿಕಾರದ ಮುಕ್ತಾಯ ಪ್ರಮಾಣ ಪತ್ರ ಹಾಗೂ ಉಲ್ಲೇಖ(4)ರ ಅಂತಿಮ ವಿನ್ಯಾಸ ಆದೇಶದಲ್ಲಿ ತಿಳಿಸಿರುತ್ತಾರೆ. ಸದರಿ ವಿನ್ಯಾಸದಲ್ಲಿ ವಸತಿ ಉದ್ದೇಶದ 24 ನಿವೇಶನಗಳಿರುತ್ತವೆ. ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಮತ್ತು ವಿದ್ಯುತ್) ಹಾಗೂ ನಗರ ಯೋಜನಾ ಉಪ ನಿರ್ದೇಶಕರು ಸ್ಥಳ ಪರಿಶೀಲಿಸಿ ಸದರಿ ವಿನ್ಯಾಸವನ್ನು ಹಸ್ತಾಂತರಿಸಿಕೊಳ್ಳಲು ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಉಲ್ಲೇಖ (06) ರನ್ವಯ ದಿನಾಂಕ: 16.08.2024ರ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿಯ ಕಾರ್ಯಕಲಾಪಗಳ ಹೆಚ್ಚಿನ ವಿಷಯ ಸಂಖ್ಯೆ: 14 ಠರಾವ ನಂ: 258 ರನ್ವಯ ಅರ್ಜಿದಾರರು ರೂ. 3,47,950/– ಶುಲ್ಕವನ್ನು ಚಲನ ನಂ.2169, 5609HDWOC11092024 ದಿನಾಂಕ: 06.12.2024 ರಂದು ಕೆನರಾ ಬ್ಯಾಂಕ ಶಿರೂರ ಪಾರ್ಕ ಹುಬ್ಬಳ್ಳಿ ಪಾಲಿಕೆಯ ಖಾತೆಗೆ ಭರಿಸಿರುತ್ತಾರೆ. ಆದ್ದರಿಂದ ಸದರಿ ವಸತಿ ಉದ್ದೇಶದ ವಿನ್ಯಾಸವನ್ನು ಈ ಕೆಳಗಿನ ಕರಾರುಗಳಿಗೆ ಒಳಪಟ್ಟು ಹಸ್ತಾಂತರಿಸಿಕೊಳ್ಳಬಹುದಾಗಿರುತ್ತದೆ.

**ಹಸ್ತಾಂತರ ಪತ್ರ**

ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ/ಬ್ಲಾಕನಂ. 154 ನೇದ್ದರ 01ಎಕರೆ–25ಗುಂಟೆ ವಿಸ್ತೀರ್ಣದ ವಸತಿ ಉದ್ದೇಶದ ವಿನ್ಯಾಸವನ್ನು ಕೆಳಕಂಡ ಕರಾರುಗಳನ್ನು ವಿಧಿಸಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿಯ ಠರಾವ್ ಹಾಗೂ ಸಾಮಾನ್ಯ ಸಭೆಯ ನಿರ್ಣಯದಂತೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲಾಗಿದೆ.

**ಷರತ್ತುಗಳು:**

1. ಸದರಿ ವಿನ್ಯಾಸದಲ್ಲಿ ಬರುವ ಉದ್ಯಾನವನ, ರಸ್ತೆ ಹಾಗೂ ಉಪರಸ್ತೆ ಪುಕ್ಕಟ್ಟೆಯಾಗಿ ಹಸ್ತಾಂತರಿಸಿ ಈ-ಆಸ್ತಿ ದಾಖಲೆಯಲ್ಲಿ ಆಯುಕ್ತರು ಹು.ಧಾ.ಮ.ಪಾಲಿಕೆ ಅಂತಾ ದಾಖಲಿಸಿ ಉತಾರ ಪೂರೈಸಬೇಕು.
2. ಸದರಿ ವಿನ್ಯಾಸದಲ್ಲಿ ವಿದ್ಯುತ್‌ದೀಪಗಳನ್ನು ಅಳವಡಿಸಿದ್ದು. ಪ್ರತಿಶತ 80ರಷ್ಟು ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರು ಸಂರಕ್ಷಣೆ ಮಾಡಬೇಕು. ಹಾಗೂ ನಿರ್ವಹಣೆ ಮಾಡಬೇಕು.
3. ಸದರಿ ವಿನ್ಯಾಸದಲ್ಲಿ ಕೊಳವೆ ಭಾವಿಯನ್ನು ಹಾಕಿದ್ದು ಎಲ್ಲ ನಿವೇಶನದಾರರಿಗೆ ನೀರನ್ನು ಪೂರೈಸಬೇಕು. ಪ್ರತಿಶತ 80ರಷ್ಟು ಮನೆಗಳು ಬಂದ ನಂತರ ಪಾಲಿಕೆಯು ಬೋರವೆಲ್ ಹಸ್ತಾಂತರಿಸಲು ಕೇಳಿದಾಗ ಪುಕ್ಕಟ್ಟೆಯಾಗಿ ಪಂಪ್ ಸಹಿತ ಸುಸ್ಥಿತಿಯಲ್ಲಿ ಹಸ್ತಾಂತರಿಸಬೇಕು.
4. ವಿನ್ಯಾಸದಲ್ಲಿ ರಸ್ತೆಗೆ ನಾಮಫಲಕ ಹಾಕಿದ್ದು, ಇವುಗಳನ್ನು ವಿನ್ಯಾಸದ ಮಾಲೀಕರು ಎಲ್ಲ ಮನೆಗಳು ಬರುವವರೆಗೆ ಸಂರಕ್ಷಣೆ ಮಾಡಬೇಕು.
5. ಸದರಿ ವಿನ್ಯಾಸದಲ್ಲಿ ಒಳಚರಂಡಿ ಕೊಳವೆ ಮಾರ್ಗವನ್ನು ಹಾಕಿದ್ದು, ಭವಿಷ್ಯದಲ್ಲಿ ಮುಖ್ಯ ಜಾಲ ಅಭಿವೃದ್ಧಿ ಹೊಂದಿದಾಗ ತಮ್ಮ ಸ್ವಂತ ಖರ್ಚಿನಿಂದ ಮುಖ್ಯ ಜಾಲಕ್ಕೆ ಜೋಡಣೆ ಮಾಡುವ ನಿಬಂಧನೆಗೊಳಪಟ್ಟಿರುತ್ತದೆ
6. ಸದರಿ ವಿನ್ಯಾಸದ ನಿವೇಶನದಾರರು ಒಳಚರಂಡಿ ಕೊಳವೆ ಮಾರ್ಗ ಚಾಲ್ತಿ ಆಗುವವರೆಗೆ ಎಲ್ಲ ನಿವೇಶನದಾರರು ವೈಯಕ್ತಿಕವಾಗಿ ಸೇಪ್ಟಿಕ್ ಟ್ಯಾಂಕ್ ನಿರ್ಮಿಸಿಕೊಳ್ಳಬೇಕು
7. ಸದರ ವಿನ್ಯಾಸದಲ್ಲಿ ನಿವೇಶನದಾರರು ಹೆಚ್ಚಿನ ಪೌರ ಸೌಲಭ್ಯವನ್ನು ಕೇಳಿದಲ್ಲಿ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಡಬೇಕು.
8. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ವಿಧಿಸಿದ ಎಲ್ಲ ಷರತ್ತುಗಳಿಗೆ ಬದ್ಧರಾಗಿರಬೇಕು.
9. ಸದರ ವಿನ್ಯಾಸದಲ್ಲಿ ಸಿವ್ಹಿಲ್ ಕಾಮಗಾರಿಗಳನ್ನು ಮುಗಿಸಿದ್ದು, ಪ್ರತಿಶತ 80ರಷ್ಟು ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ನಿರ್ವಹಣೆ ಮಾಡಬೇಕು.
10. ಸದರ ವಿನ್ಯಾಸ ಹಸ್ತಾಂತರವಾದ ನಂತರ ಯಾವುದೆ ತರಹದ ಲೆಕ್ಕ ಪರಿಶೋಧಕರಿಂದ ಆಕ್ಷೇಪಣೆಗಳು ಬಂದಲ್ಲಿ ಸದರ ಆಕ್ಷೇಪಣೆಗೆ ತಗಲಬೇಕಾದ ವೆಚ್ಚವನ್ನು ವಿನ್ಯಾಸದ ಮಾಲೀಕರೇ ಭರಿಸಬೇಕಾಗುತ್ತದೆ ಈ ಬಗ್ಗೆ ಮುಚ್ಚಳಿಕೆ ಪತ್ರ ನೀಡಬೇಕು.
11. ಸದರಿ ವಿನ್ಯಾಸಕ್ಕೆ ಸಂಬಂಧಿಸಿದಂತೆ ಪರಿಶೋಧನಾ ಶುಲ್ಕ, ವಿದ್ಯುತ್ ಸಂಪರ್ಕ ಶುಲ್ಕ, ಘನತ್ಯಾಜ್ಯಾ ನಿರ್ವಹಣಾ ಶುಲ್ಕ, ಟ್ರಿ ಹಾಗೂ ಟ್ರಿಗಾರ್ಡ ಶುಲ್ಕ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಜಲಮಂಡಳಿರವರು ತಿಳಿಸಿರುವಂತೆ ನೀರು ಬಳಕೆದಾರರಿಂದ ಪ್ರೋರೇಟಾ ಶುಲ್ಕ; ಇತರೆ ಶುಲ್ಕ / ಫೀ ಯನ್ನು ಪಾಲಿಕೆಯು ನಿಗದಿ ಪಡಿಸಿದ ಚಾಲ್ತಿ ಸಾಲಿನ ದರದಂತೆ ಭರಿಸಬೇಕಾಗುತ್ತದೆ.

DDTP

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ 30/12/2024

ಪ್ರತಿಗಳು:-

1) ಆಯುಕ್ತರು ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
2) ಅಧೀಕ್ಷಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
3) ಕಾರ್ಯನಿರ್ವಾಹಕ ಅಭಿಯಂತರರು, (ಉತ್ತರ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
4) ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಜಲ ಮಂಡಳಿ (ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ) ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
5) ಕಾರ್ಯ ನಿರ್ವಾಹಕ ಅಭಿಯಂತರರು, ವಿದ್ಯುತ್ ವಿಭಾಗ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
6) ಸಹಾಯಕ ಆಯುಕ್ತರು, ವಲಯ ಕಚೇರಿ ಸಂಖ್ಯೆ:07 ಸದರಿ ವಸತಿ ವಿನ್ಯಾಸದಲ್ಲಿನ ನಿವೇಶನಕ್ಕೆ ಸಂಬಂಧಪಟ್ಟ ಶುಲ್ಕವನ್ನು ಪಾವತಿಸಿಕೊಂಡ ನಂತರ ಖಾತೆಯನ್ನು ತೆರೆಯತಕ್ಕದ್ದು
7) ಕಾರ್ಯಪಾಲಕ ಅಭಿಯಂತರರು, ತೋಟಗಾರಿಕೆ ವಿಭಾಗ, ಹು.ಧಾ.ಮ.ಪಾಲಿಕೆ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
8) ಶ್ರೀ ಭೀಮಪ್ಪ ತಂದೆ ದ್ಯಾಮಪ್ಪ ಜಟ್ಟೆಪ್ಪನವರ ಸಾ॥ ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.